ಶ್ರೀ ಎಚ್. ಸಿ. ಲಿಂಗಾರೆಡ್ಡಿ.—1960ನೆಯ ಇಸವಿ ಮಾರ್ಚ್ 3ನೆಯ ತಾರೀಖಿನ ವರೆಗೆ ಈಗ ಇರುವಂತೆಯೇ ಜಾರಿಯಲ್ಲಿರಬೇಕೆಂದು ತೀರ್ಮಾನಿಸಿದೆ.

ಶ್ರೀ ಜೆ. ಮೆಂಕಟಪ್ಪ.—ಇದರ ಬಗ್ಗೆ ಬಹಳ ಜಾಗ್ರತೆಯಾಗಿ ಏನಾದರೂ ತೀರ್ಮಾನಗಳನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಬಾಬಿನಲ್ಲಿ ಎಷ್ಟು ಖರ್ಚಾಗುತ್ತದೆಂಬುದನ್ನು ನೋಡಿಕೊಂಡು ಆಮೇಲೆ ತೀರ್ಮಾನಗಳನ್ನು ಮಾಡುತ್ತೇವೆ.

Sri J. B. MALLARADHYA.—Are the Government aware that the Central Silk Board are quite willing to finance to any extent possible in this particular matter? Secondly are the Government aware that in fixing subsidy there has been a lot of laxity and favouritism?

Sri T. MARIAPPA.—I thank the Hon'ble Member for the question. It is on account of this that we have rationalised it in this manner.

Sri J. B. MALLARADHYA.—Has it come to the notice of Government that even in the matter of fixing the quantum of subsidy in a number of cases there has been discrimination? If you want, I will give instances.

Sri T. MARIAPPA.—Such a criticism was voiced even in the State Advisory Committee. Therefore Government thought over the matter and rationalised it.

Sri D. ABDUL RASHEED.—In view of the importance of the seed area, will the Government meet the entire cost estimated for sinking wells in seed area?

Sri T. MARIAPPA.—It is difficult for us. Even for foodgrains only Rs. 250 is given; but the Central Silk Board was generous to give more.

Sri G. VENKATAI GOWDA.—Having followed a certain policy during the last three years in the Second Five Year Plan, may I know the special necessity to change that?

Sri T. MARIAPPA.—Because of the criticisms and the instances pointed out by Sri Mallaradhya we had to revise the whole thing in consultation with the Central Silk Board.

Sri G. VENKATAI GOWDA.—Has it come to the notice of the Government that the cost of sinking wells would come to more than 500 rupees.

Sri T. MARIAPPA.—After all, a thousand rupees is a great sum for commercial crops; if we remember that for food crops we give only Rs. 250. That is why there were some criticisms and we are rationalising it.

Sri G. VENKATAI GOWDA.—If the Government comes to know that the number of persons seeking aid would be less, would they try to change their policy?

Sri T. MARIAPPA.—I ascertained public opinion. I put this proposition in every meeting I addressed. All of them have welcomed this.

Principles governing the use of Cars allotted to Ministers.

*Q.—322. **Sri C. J. MUCKANNAPPA** (Gubbi).—

Will the Government be pleased to state:—

(*a*) the policy of the Government in allotting Government cars to the Ministers; and the conditions governing the use of such cars;

(*b*) whether there are any instances of Ministers having misused Government cars under their control;

(*c*) whether it is not a fact that the car allotted to the Minister for Co-operation is used by his daughter and son-in-law who is employed in Hindustan Aircraft Factory;

(*d*) whether it is not a fact that the car of the Minister for Co-operation was used by his daughter and son-in-law outside Bangalore four times, and if so, the distance covered by the car in these journeys;

(*e*) whether it is not also a fact that the car of the Minister for Co-operation is used by his son-in-law to go to the factory every day when the Minister is at Headquarters?

*A.—**Sri B. D. JATTI** (Chief Minister).

(*a*) Under Section 5 (i) of the Mysore Ministers Salaries and Allowances Act, 1956, cars are provided for Ministers for use in the proper discharge of their duties and responsibilities.

(*b*) No.

(*c*) No.

(*d*) No.

(*e*) No.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ನಾನು ತಿಳಿದು ಕೊಂಡಿರುವ ಮಟ್ಟಿಗೆ ಸರಕಾರದ ಕಾರುಗಳನ್ನು ಸರಕಾರಿ ಕೆಲಸಗಳಿಗೋಸ್ಕರ ಉಪಯೋಗಿಸಬೇಕು. ಆದರೆ ಈ ಸರಕಾರದ ಕಾರುಗಳನ್ನು ಬೆಂಗಳೂರಿ ನಿಂದಾಚೆಗೆ 106 ಮೈಲಿಗಳವರೆಗೆ ಮದುವೆ, ಮುಂಜಿ ಇತ್ಯಾದಿ ಕೆಲಸಗಳಿಗಾಗಿ ಉಪಯೋಗಿಸಿದರೆ ಸರಕಾರದ ಕೆಲಸವನ್ನು ನಿರ್ವಾಹ ಮಾಡಿದಂತಾಗು ವುದೇ ?

Sri B. D. JATTI.—The question is hypothetical. It is rather difficult to answer it.

Sri C. J. MUCKANNAPPA.—May I know whether the cars are meant for the discharge of official duties by Ministers or whether they are for attending marriage functions or visits to relatives etc.?

Sri B. D. JATTI.—According to the information I have, the cars are being used for official purposes.

Sri C. J. MUCKANNAPPA.—Is it not a fact that on the 20th May 1959 the car of the Minister for Co-operation was carrying his daughter and son-in-law to a marriage function at Sira?

Sri B. D. JATTI.—If the Minister happened to go to a marriage function or to a Government function and he took the members of his family along, it would not be a mistake. If the Ho'ble Member wanted to go to Mysore to attend a marriage function and a Minister, say Sri Kadidal Manjappa, who happened to go to Mysore, took him along, it would not be considered a wrong. (*Laughter*).

Sri C. J. MUCKANNAPPA.—If the Minister's family travelled along with the Minister, I would have no objection. But is it not a fact that in this particular case, the Minister was not travelling in the car?

ಅಧ್ಯಕ್ಷರು.—ಅವರು "ಇಲ್ಲ" ಎಂದು ಉತ್ತರದಲ್ಲಿ ಹೇಳಿದ್ದಾರೆ.

Sri C. J. MUCKANNAPPA.—I was an eye-witness to the fact, Sir. (Laughter). The Minister for Co-operation was not attending the marriage.

ಅಧ್ಯಕ್ಷರು.—ಆಗಲೇ ಉತ್ತರ ಹೇಳಿದ್ದಾರೆ.

Sri C. J. MUCKANNAPPA.—May I know where the Minister for Co-operation was on 20-7-1959?

Sri B. D. JATTI.—I have not kept a register of the movement of the Ministers minute by minute. May I know where the Hon'ble Member was on the 20th January 1958? (Laughter).

Sri C. J. MUCKANNAPPA.—My diary would speak about it. I will be able to tell the Chief Minister about my movements. Now, may I know whether under the rules, drivers are not provided for the cars of Ministers?

(There was derisive laughter from the Treasury benches.)

Sri C. J. MUCKANNAPPA.—Sir, My friends on the other side have no objection if a poor Revenue Inspector is held up for taking a bribe of Rs. 2, but if the Ministers misuse their cars for private purposes, they keep mum. I will ask a question. Is it not a fact that in spite of providing drivers for Government cars, the cars of Ministers are being driven by their relatives?

Sri B. D. JATTI.—I have no information. I think the allegation is incorrect.

Sri C. J. MUCKANNAPPA.—Did not the Finance Minister's car meet with an accident when it was being driven by his brother-in-law?

Sri B. D. JATTI.—That is not the question under discussion now.

ಶ್ರೀ ಟಿ. ತಾರೇಗೌಡ.—ಸರಕಾರದವರು ಕಾರನ್ನು ದುರುಪಯೋಗ ಮಾಡಿಲ್ಲ ಎಂದು ಉತ್ತರ ಹೇಳಲಾಗಿದೆ. ಇದನ್ನು ಮಾನ್ಯ ಸದಸ್ಯರು ಬಹಳ ವಿಸ್ತಾರವಾಗಿ ಹೀಗೆ ತಗೆದುಕೊಂಡು ಹೋದರೆ ಸರಿಯಾಗಿರುತ್ತದೆಯೇ ?

ಅಧ್ಯಕ್ಷರು.—ಉತ್ತರ ಹೇಳಬೇಕೆಂದು ಕೇಳುತ್ತಿದ್ದಾರೆ.

ಶ್ರೀಮತಿ ನಾಗರತ್ನಮ್ಮ.—ಸರಕಾರಿ ಕೆಲಸಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ಮಂತ್ರಿಗಳಿಗೆ ಮಾತ್ರ ಕಾರುಗಳನ್ನು ಕೊಡಲಾಗಿದೆ ಮತ್ತು ಅದರಂತೆ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ಆದರೆ ಉಪ ಸಚಿವೆಯೊಬ್ಬರು ಹಾಗೇ ನಡೆದುಕೊಂಡು ಬಂದು ತಮ್ಮ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ ಎನ್ನುವುದು ಗಮನಕ್ಕೆ ಬಂದಿದೆಯೇ ?

Sri B. D. JATTI.—It is a fact that Deputy Ministers have not been supplied with cars. The lady Deputy Minister is also one among the Deputy Ministers.

Sri C. J. MUCKANNAPPA.—I never wanted to put this question. ಆದರೆ ಇಲ್ಲಿ ಕೊಟ್ಟಿರುವಂತಹ ಉತ್ತರವನ್ನು ಒಪ್ಪುವುದಾದರೂ ಹೇಗೆ ?

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮಂತ್ರಿಗಳು ತಮ್ಮ ಮನೆಯವರನ್ನು ಯಾವಾಗಲಾದರೂ ಅನ್ಯತ್ರಕ್ಕೆ ಕರೆದುಕೊಂಡು ಹೋಗತಕ್ಕ ಸಂದರ್ಭದಲ್ಲಿ ಈ ಕಾರುಗಳನ್ನು ಉಪಯೋಗಿಸುವುದಕ್ಕೆ ಅಭ್ಯಂತರ ವಿದೆಯೆ ?

Sri B. D. JATTI.—It is a very difficult matter for me to reply. If by

chance a Minister met a member on the road and out of ordinary courtesy he picks him up, would it be a sin? After all the Minister should have the discretion to attend a social function in the car and may be, members of his family or friends accompany him. If Hon'ble Members put this sort of questions, it would become difficult for any Minister to attend a social function.

Nationalisation of Bangalore-Anekal Route.

*Q.—334. Sri KUNDUR RUDRAPPA (Channagiri).—

Will the Government be pleased to state :—

(*a*) whether the judgement of the Supreme Court on the writ application relating to the Bangalore—Anekal route was against them ;

(*b*) the expenditure incurred for administrative, executive and court purposes (both High Court and Supreme Court) in respect of the writ application relating to nationalising the Bangalore—Anekal route ?

A.—Sri K. F. PATIL (Minister for Forest and Transport).—

(*a*) No.

(*b*) Expenditure incurred.—

(i) Administrative and (ii) Executive } Nil.

(iii) Court purposes.—

(a) High Court of Mysore. Rs. 5,291.31

(b) Expenditure in the Supreme Court. Information not yet available.

ಶ್ರೀ ಕುಂದೂರು ರುದ್ರಪ್ಪ.—ಖಾಸಗಿ ಬಸ್ಸುಗಳು ಅನೆಕಲ್ಲು ಮಾರ್ಗದಲ್ಲಿ ನ್ಯಾಷನಲೈಸು ಮಾಡುವುದಕ್ಕೆ ಮುಂಚೆ ಎಷ್ಟು ಓಡಾಡುತ್ತಿದ್ದುವು ? ಮತ್ತು ಈಗೆ ಸರಕಾರಿ ಬಸ್ಸುಗಳು ಎಷ್ಟು ಓಡಾಡುತ್ತಿವೆ ?

†ಶ್ರೀ ಕೆ. ಎಫ್. ಪಾಟೀಲ್.—ನೋಟೀಸು ಕೊಟ್ಟರೆ ಹೇಳಬಹುದು.

ಶ್ರೀ ಕುಂದೂರು ರುದ್ರಪ್ಪ.—ಹೈಕೋರ್ಟಿನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಾದ ಆರ್ಡರು ಸರಕಾರಕ್ಕೆ ವಿರೋಧವಾಗಿದೆ ಎಂದು ಖಾಸಗೀ ಬಸ್ಸುಗಳನ್ನು ಓಡಿಸಲು ಪರ್ಮಿಷನ್ನು ಕೊಡಲಾಗಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ನ್ಯಾಷನಲೈಸು ಸ್ಕೀಮು ಫೇಲ್ ಆಗಿದೆ ಎಂದಲ್ಲ. ಹೈಕೋರ್ಟಿನಲ್ಲಾಗಲಿ ಸುಪ್ರೀಂ ಕೋರ್ಟಿನಲ್ಲಾಗಲಿ ರಾಷ್ಟ್ರೀಕರಣ ಮಾಡುವುದು ನ್ಯಾಯ ಬದ್ಧವಲ್ಲ ಎಂದು ಹೇಳಿಲ್ಲ. ಆದರೆ, ಒಮ್ಮೆ ಲೈಸನ್ಸ್ ಪಡೆದವರು ನೂತನವಾಗಿ ಮೂರು ವರ್ಷಗಳ ಕಾಲ ಬಸ್ಸುಗಳನ್ನು ನಡೆಸಲು ಅವಕಾಶ ಬಿರಬೇಕು ಎಂದು ನಿರ್ಣಯ ಕೊಟ್ಟಿದ್ದಾರೆ.

ಒಂದು ಸ್ಕೀಂ ಅಪ್ರೂವ್ ಆಗಿದ್ದರೆ ಇಡಿಯ ಸ್ಕೀಮನ್ನೇ ತೆಗೆದುಕೊಳ್ಳಬೇಕೇ ಹೊರತು ಅದರಲ್ಲಿ ಒಂದೊಂದು ಭಾಗವನ್ನು ತೆಗೆದುಕೊಳ್ಳಲಾಗದೆಂದು ನಿರ್ಣಯ ಕೊಟ್ಟಿದ್ದಾರೆ. ರಾಷ್ಟ್ರೀಕರಣ ಯೋಜನೆಯ ವಿಚಾರದಲ್ಲಿ ಅವರು ಕೈ ಹಚ್ಚಿಲ್ಲ. ಅದನ್ನು Praise ಕೂಡ ಮಾಡಿದ್ದಾರೆ.

Sri VEERENDRA PATIL.—Is the decision of the Supreme Court in favour of the Government or against the Government and in favour of the private bus operators ?

†Sri B. D. JATTI.—The scheme was published by the Government and the scheme has not been disturbed. It has been upheld by the Supreme Court and so we say that the Supreme Court's decision is in favour of the Government.

ಶ್ರೀ ಕುಂದೂರು ರುದ್ರಪ್ಪ.—ಅನೆಕಲ್ ಮಾರ್ಗದಲ್ಲಿ ಬಸ್ ರಾಷ್ಟ್ರೀಕರಣ ಮಾಡಿಕೊಂಡಿರುವುದು ನಿಜವೇ ?

ಶ್ರೀ ಕೆ. ಎಫ್. ಪಾಟೀಲ್.—ಹೌದು.

ಶ್ರೀ ಕುಂದೂರು ರುದ್ರಪ್ಪ.—ಹಾಗಾದರೆ ಸರ್ಕಾರಿ ಬಸ್ ಓಡುತ್ತಿರಬೇಕಾದರೆ ಖಾಸಗಿ ಬಸ್ ಓಡಿಸುವುದಕ್ಕೆ ಪರ್ಮಿಷ್ಟ ಕೊಟ್ಟಿದ್ದಾರೆಯೇ ?

ಶ್ರೀ ಕೆ. ಎಫ್. ಪಾಟೀಲ್.—ರಾಷ್ಟ್ರೀಕರಣ ಯೋಜನೆಯನ್ನು ಅಂಗೀಕಾರ ಮಾಡಿದ ಮೇಲೆ, ಸ್ವಲ್ಪ technical mistake ಇದ್ದುದರಿಂದ ಪುನಃ ಅಪ್ಲಿಕೇಷನ್ ಹಾಕಿದ್ದೇವೆ. ಮುಂದಿನ ತಿಂಗಳು ಐದನೆಯ ತಾರೀಖಿನಿಂದ ನಾವು ಬಸ್ ಓಡಿಸುತ್ತೇವೆ. ಮೊದಲು ಯೋಜನೆಯನ್ನು ತಯಾರು ಮಾಡಿಕೊಂಡು, ಅಪ್ರೂವಲ್ ಆದ ಮೇಲೆ ಬಸ್ ಹಾಕಿ, ನಡೆಸುವ ತನಕ ಒಂದೇ ಯೋಜನೆ. ಬಸ್‌ಗೆ ಅಪ್ಲಿಕೇಷನ್ ಹಾಕಿದ್ದರೂ ಅದು ರಾಷ್ಟ್ರೀಕರಣ ಯೋಜನೆ. ಆದುದರಿಂದ ರಾಷ್ಟ್ರೀಕರಣ ಯೋಜನೆಯಲ್ಲಿ ಇದು ಇದ್ದೇ ಇದೆ.

ಶ್ರೀ ಕುಂದೂರು ರುದ್ರಪ್ಪ.—ಜೆಕ್ಕಿಕಲ್ ವಿಷಯಕ್ಕೆ ಸಂಬಂಧಪಟ್ಟ ತಪ್ಪಿನಿಂದ ಈ ರೀತಿಯಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಏನಾದರೂ ಶಿಕ್ಷೆ ವಿಧಿಸಿದ್ದೀರಾ ?

ಶ್ರೀ ಕೆ. ಎಫ್. ಪಾಟೀಲ್.—ಕಾರಣವಿಲ್ಲ. It is a matter of interpretation. ಹೈಕೋರ್ಟಿನಲ್ಲಿ ಒಂದು ರೀತಿ ನಿರ್ಣಯವಾಗಿದೆ, ಸುಪ್ರೀಂ ಕೋರ್ಟಿನಲ್ಲಿ ಒಂದು ರೀತಿ ನಿರ್ಣಯವಾಗಿದೆ. ಎಲ್ಲ interpretation ಮೇಲೆ ಹೋಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಆ ಸೆಕ್ಶನ್‌ಗಳು ತಮ್ಮ ಕೈಯಲ್ಲಿದ್ದರೂ ಕೂಡ ಸರ್ಕಾರದವರು ಮಾಡಿದ್ದು ತಪ್ಪು ಎಂದು ತೀರ್ಮಾನ ಕೊಟ್ಟರೆ ಅವರಿಗೆ ಮನೋವ್ಯಥೆಯಾಗುವುದಿಲ್ಲವೇ ?